**ಓ ಎಸ್ .ಸಂಖ್ಯೆಃ 805/2024**

**ಪಿ ಡಬ್ಲ್ಯೂಃ 1**

**ದಿನಾಂಕಃ 09.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಎ ಜಿ ಪಿ ಅವರಿಂದಃ**

1. ನಾನು 1 ರಿಂದ 7 ನೇ ತರಗತಿವರೆಗೆ 1 ನೇ ಪ್ರತಿವಾದಿಯ ಶಾಲೆಯಲ್ಲಿ ಕಲಿತಿರುತ್ತೇನೆ. ಸದರಿ ಶಾಲೆಯಲ್ಲಿ ನನ್ನ ತಾಯಿಯ ಹೆಸರು ನಾಗಮ್ಮ ಮಾದರ ಎಂದು ನಮೂದು ಇದೆ ಎಂದರೆ ಸರಿ. ಸದರಿ ಶಾಲೆಯ ದಾಖಲಾತಿಗಳಲ್ಲಿ ತಂದೆಯ ಹೆಸರು ಪ್ರಾಣೇಶ ಎಂದು ನಮೂದು ಇಲ್ಲ ಎಂದರೆ ಸರಿ.
2. 8 ರಿಂದ 10 ನೇ ತರಗತಿಯವರೆಗೆ ನಾನು 2 ನೇ ಪ್ರತಿವಾದಿಯ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಪಿಯುಸಿಯನ್ನು 5 ನೇ ಪ್ರತಿವಾದಿ ಕಾಲೇಜಿನಲ್ಲಿ ಮಾಡಿರುತ್ತೇನೆ. ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆಯುವಾಗ ಎಕ್ಸಾಂ ಫಾರಂ ಅನ್ನು ನಾವೇ ಭರ್ತಿ ಮಾಡುತ್ತೇವೆ ಎಂದರೆ ಸರಿ. ಎಸ್ ಎಸ್ ಎಲ್ ಸಿ ಪರೀಕ್ಷೆ ಫಾರಂನಲ್ಲಿ ನಾನು ನನ್ನ ತಂದೆಯ ಹೆಸರನ್ನು ಪ್ರಾಣೇಶ ಎಂದು ಬರೆದುಕೊಟ್ಟ ಕಾರಣ ಅಂಕಪಟ್ಟಿಯಲ್ಲಿ ತಂದೆಯ ಹೆಸರು ಪ್ರಾಣೇಶ ಎಂದು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಂಕಪಟ್ಟಿಯ ಆಧಾರದ ಮೇಲೆ ತಂದೆಯ ಹೆಸರು ಪ್ರಾಣೇಶ ಎಂದು ನನ್ನ ಶಾಲಾ ದಾಖಲಾತಿಗಳಲ್ಲಿ ನಮೂದು ಆಗಿದ್ದು, ಸದರಿ ವಿಚಾರದಲ್ಲಿ ಪ್ರತಿವಾದಿಗಳದ್ದು ತಪ್ಪು ಇಲ್ಲ ಎಂದರೆ ಸರಿಯಲ್ಲ.
3. ಪ್ರತಿವಾದಿಗಳ ವಿರುದ್ಧ ದಾವೆ ಮಾಡಲು ನನಗೆ ಯಾವುದೇ ವ್ಯಾಜ್ಯ ಕಾರಣ ಉದ್ಭವಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**

**ಒ ಎಸ್ .ಸಂಖ್ಯೆಃ 805/2024**

**ಪಿ ಡಬ್ಲ್ಯೂಃ 1**